CC 1539/2022

P**W1**

ದಿನಾಂಕಃ-09.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಡಿ ಎಲ್ ರವರಿಂದಃ-**

9. ನಾನು ನೋಟಿಸ್ ನ್ನು ಆರೋಪಿಗೆ ಯಾವ ದಿನಾಂಕ ಕಳುಹಿಸಿರುತ್ತೇನೆ ಎನ್ನುವುದು ನನಗೆ ಈಗ ನೆನಪಿಲ್ಲ ಎಂದರೆ ಸರಿ. ನಾನು ಈ ಕೇಸನ್ನು 48 ದಿನಗಳ ಕಾಲ ವಿಳಂಬವಾಗಿ ಹೂಡಿರುತ್ತೇನೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಕರೋನಾ ಇತ್ತು ಆಗಾಗಿ ತಡ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಈ ಕೇಸನ್ನು ಹೂಡುವ ಕಾಲಕ್ಕೆ ಯಾವುದೇ ಕರೋನಾ ಇರಲಿಲ್ಲ ಎಂದರೆ ಸರಿಯಲ್ಲ.

10. ನಾನು 2019ರ ಮೂರನೇ ತಿಂಗಳಿನಲ್ಲಿ ಚೆಕ್ಕನ್ನು ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ನಾನು 2019ರ ಮಾರ್ಚ್ ತಿಂಗಳಿನಲ್ಲಿ ಆರೋಪಿಗೆ ಹಣ ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಸಾಕ್ಷಿಯು ಮುಂದುವರೆದು ಆಗಲೇ ಆರೋಪಿಯು ನಿಪಿ-1ರಂತೆ ಇರುವ ಚೆಕ್ಕನ್ನು ನನಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಲದ ಪತ್ರವನ್ನು ನನಗೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಸಾಲದ ಪತ್ರದಲ್ಲಿ ನಿಪಿ-1ರ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಆರೋಪಿಗೆ ಸಾಲ ಕೊಡುವ ಸಮಯದಲ್ಲಿ ನಿಮ್ಮ ಬಳಿ ಅಷ್ಟೊಂದು ಹಣ ಇತ್ತು ಎಂದು ತೋರಿಸಲು ನೀವು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ, ನನಗೆ ಬೇಕರಿಯಿಂದ ಬಂದ ಹಣವನ್ನು ಮನೆಯಲ್ಲಿ ಕೂಡಿಟ್ಟಿದ್ದೆ, ಆದೇ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಆರೋಪಿಗೆ 7ಲಕ್ಷ 24ಸಾವಿರ

ರೂಪಾಯಿ ಸಾಲವಾಗಿ ಕೊಡುವ ಆರ್ಥಿಕ ಸಮರ್ಥ್ಯತೆ ನನಗೆ ಇಲ್ಲದೆ ಇರುವ ಕಾರಣಕ್ಕೆ ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

11. ನಿಪಿ-1ರಲ್ಲಿ 3ಲಕ್ಷ 74ಸಾವಿರ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-1ರಲ್ಲಿ ಇರುವ ಆರೋಪಿಯ ಸಹಿಗೂ ಅದರಲ್ಲಿರುವ ಇತರೆ ಒಕ್ಕಣಿಗಳಿಗೂ ವ್ಯತ್ಯಾಸ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ-3ರಲ್ಲಿ ದಿನಾಂಕ.23.12.2018ರಂದು ಆರೋಪಿ ನನಗೆ ಅರ್ಧ ಹಣ ಕೊಟ್ಟು ಉಳಿದ ಹಣದ ಮರುಪಾವತಿಗಾಗಿ ಮೂರು ತಿಂಗಳ ವಾಯಿದೆ ಪಡೆದುಕೊಂಡಿದ್ದರು ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿ ನನಗೆ ಅದಕ್ಕೂ ಮೊದಲೆ ಎರಡು ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಕೊಟ್ಟಿದ್ದರು, ಅದರ ಪೈಕಿ ಒಂದು ಚೆಕ್ಕನ್ನು ಮೊದಲೆ ನಗದೀಕರಣಕ್ಕಾಗಿ ಹಾಕಿಕೊಂಡಿದ್ದೆ, ಆದದಾನಂತರ ಆರೋಪಿಗೆ ಕೇಳಿ ಅವರೆ ಚೆಕ್ಕಿನಲ್ಲಿ ಒಕ್ಕಣೆಗಳನ್ನು ಬರೆದುಕೊಟ್ಟ ನಂತರ ನಗದೀಕರಣಕ್ಕಾಗಿ ಇನ್ನೊಂದು ಚೆಕ್ಕನ್ನು ಹಾಜರುಪಡಿಸಿದ್ದೆ ಎಂದು ನುಡಿಯುತ್ತಾರೆ. ಆರೋಪಿ ಕೊಟ್ಟ ಎರಡು ಚೆಕ್ಕುಗಳು ನಗದೀಕರಣವಾಗಿ ನಿಮ್ಮ ಖಾತೆಗೆ ಹಣ ಬಂತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಒಂದು ಚೆಕ್ಕಿಗೆ ಸಂಬಂಧಿಸಿದಂತೆ 50ಸಾವಿರ ರೂಪಾಯಿಗಳು ಮಾತ್ರ ನನ್ನ ಖಾತೆಗೆ ಜಮಾ ಆಗಿರುತ್ತದೆ, ಆದರೆ ಇನ್ನೊಂದು ಚೆಕ್ಕಿಗೆ ಸಂಬಂಧಿಸಿದಂತೆ ಯಾವುದೇ ಹಣ ನನ್ನ ಖಾತೆಗೆ ಜಮಾ ಆಗಿಲ್ಲ ಎಂದು ನುಡಿಯುತ್ತಾರೆ. ಇನ್ನೊಂದು ಚೆಕ್ಕಿನ ಮೊತ್ತ ಎಷ್ಟು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 3ಲಕ್ಷ 74ಸಾವಿರ ಇತ್ತು ಎಂದು ನುಡಿಯುತ್ತಾರೆ. ಈ ಎರಡು ಖಾಲಿ ಚೆಕ್ಕುಗಳನ್ನು ಮೊದಲೇ ಸಹಿ ಮಾಡಿ ಆರೋಪಿ ನಿಮಗೆ ಕೊಟ್ಟಿದ್ರ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

12. ದಿನಾಂಕ.23.12.2018ರಂದು ಅರ್ಧ ಹಣ ಪಾವತಿ ಮಾಡಿದ ಮೂರು ತಿಂಗಳ ನಂತರ ನಾನು ಹೋಗಿ ಕೇಳಿದಾಗಲೇ ಆರೋಪಿ ನನಗೆ ನಿಪಿ-1ನ್ನು ಕೊಟ್ಟಿರುತ್ತಾರೆಂದು ನನ್ನ ನೋಟಿಸ್ಸಿನಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಹಣ ತೆಗೆದುಕೊಳ್ಳುವಾಗ ಆರೋಪಿ ನನಗೆ ಎರಡು ಚೆಕ್ಕುಗಳನ್ನು ಕೊಟ್ಟಿರುತ್ತಾರೆಯೇ ವಿನಾಃ ಆದಾದನಂತರ ಆರೋಪಿ ನನಗೆ ಯಾವುದೇ ಚೆಕ್ಕುಗಳನ್ನು ಕೊಟ್ಟಿಲ್ಲ ಎಂದರೆ ಸರಿ. ಆರೋಪಿ ನನಗೆ ಕೊಡಬೇಕಾಗಿದ್ದ ಹಣವನ್ನು ಈಗಾಗಲೇ ಸಂಪೂರ್ಣವಾಗಿ ಪಾವತಿಸಿದ್ದರೂ ಸಹ ನನ್ನ ಬಳಿ ಇದ್ದ ಆರೋಪಿಯ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಕೇಸನ್ನು ದಾಖಲೆಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲದೆ ಇದ್ದರೂ ಸುಳ್ಳು ಕೇಸನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

(ರಾಧಾ ಎಸ್.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,

ಕನಕಪುರ